

# ಒಳಾಂಗಣದಲ್ಲಿ ಬೆಳೆಸುವ ಸಸ್ಯಗಳು-ಆರೈಕೆಯ ಕ್ರಮ

| ಒಳಾಂಗಣ ಸಸ್ಯ | ಬೆಳಕಿನ ಬೇಡಿಕೆ | ನೀರಿನ ಬೇಡಿಕೆ |
|---|---|---|
| ಅಲೊವೆರಾ(ಅತಿ ಕಡಿಮೆ ಕಾಳಜಿ) | ಪ್ರಕಾಶಮಾನವಾದ ಬೆಳಕು ಆದ್ಯತೆ. ಮಂದ ಬೆಳಕಾದರೂ ಅಡ್ಡಿಯಿಲ್ಲ. | ಬಹಳ ಕಡಿಮೆ |
| ಅರೇಕಾ ಪಾಮ್ | ಪ್ರಕಾಶಮಾನ ಪರೋಕ್ಷ ಬೆಳಕು. ನೆರಳು ಸಲ್ಲ | ನಿಯಮಿತ, ಕ್ರಮಬದ್ಧ ನೀರು |
| ಫರ್ನ್ | ಪರೋಕ್ಷ, ಬೆಳಗಿನ/ ಸಂಜೆಯ ನೇರ ಬೆಳಕು | ದಿನವೂ ನೀರಿನ ಸಿಂಪಡಣೆ, ವಾರಕ್ಕೊಮ್ಮೆ ಬುಡಕ್ಕೆ ನೀರುಣಿಸುವುದು |
| ಬ್ರೊಮಿಲಿಡ್ಸ್ | ಪರೋಕ್ಷ ಬೆಳಕು | ಎಲೆಗಳ ಮಧ್ಯದ ಕುಳಿಯಲ್ಲಿ ನೀರು ಹನಿಸುವುದು |
| ಅಗ್ಲೋನಿಮಾ | ಮಂದ ಪರೋಕ್ಷ ಬೆಳಕು. ನೇರ ಬೆಳಕಿಂದ ದೂರವಿಡಿ | ಮಣ್ಣಿನ ತೇವಕ್ಕನುಗುಣವಾಗಿ ವಾರಕ್ಕೊಮ್ಮೆ ನೀರುಣಿಸುವುದು |
| ಜೇಡ್ ಪ್ಲಾಂಟ್(ಬೋನ್ಸಾಯ್‌ಗೂ ಸೂಕ್ತ) | ಮಂದ ಬೆಳಕು | ಮಿತವಾದ ನೀರಿನ ಸಿಂಪಡಣೆ, ನೀರು ಹನಿಸುವ ಅವಧಿಯ ನಡುವೆ ಮಣ್ಣು ಪೂತಿಯಾಗಿ ಒಣಗಿರಬೇಕು. |
| ಡ್ರೆಸಿನಾ | ಮಿತವಾದ ಕಡಿಮೆ ಬೆಳಕು, ಬೆಳಕು ತೀರಾ ಕೊರತೆಯಾದಲ್ಲಿ ಎಲೆಗಳು ಕೊಕ್ಕೆಯಾಗುತ್ತವೆ | ತೀರಾ ಹಸಿಯಾಗದ, ತೀರಾ ಒಣಗದ, ಮಿತ ತೇವದ ಮಣ್ಣಿರುವಂತೆ ನೀರುಣಿಸುವುದು |
| ಡೈಫೆನ್‌ಬೇಕಿಯಾ | ಮಂದ ಪರೋಕ್ಷ ಬೆಳಕು. ನೇರ ಬೆಳಕು ಎಲೆಗಳನ್ನು ಸುಡುತ್ತವೆ. | ಮಣ್ಣು ಹಸಿಯಾಗಿರುವಂತೆ |
| ಫಿಲೊಡೆಂಡ್ರೋನ್(ಹ್ಯಾಂಗಿಂಗ್‌ಗೂ ಸೂಕ್ತ) | ತೀರಾ ತೀಕ್ಷ್ಣವಲ್ಲದ, ಕಿಟಕಿಯಿಂದ ನುಸುಳುವ ಬೆಳಕು | ತೇವಾಂಶ ಕಾಪಾಡಲು ದಿನವೂ ನೀರಿನ ಸಿಂಪಡಣೆ. ಮಿತವಾದ ತೇವದ ಮಣ್ಣಿರುವಂತೆ ನೀರುಣಿಸುವುದು |
| ಹೊಮಾಲೊಮೇನಾ | ಕಿಟಕಿಯ ಗಾಜಿನಿಂದ ಹಾಯುವ ತೀಕ್ಷ್ಣ ಬೆಳಕು | ವಾರಕ್ಕೊಮ್ಮೆ |
| ಇಂಗ್ಲಿಷ್ ಐವಿ(ಹ್ಯಾಂಗಿಂಗ್ ಗೂ ಸೂಕ್ತ)(ಅತಿ ಕಡಿಮೆ ಕಾಳಜಿ) | ಮಿತವಾದ ಪರೋಕ್ಷ ಬೆಳಕು | ವಾರಕ್ಕೊಮ್ಮೆ |
| ಆಂಥೋರಿಯಮ್(ಹೂ ಬಿಡುವ ಸಸ್ಯ) | ಕಿಟಕಿಯಿಂದ ಹಾಯುವ ಪ್ರಕಾಶಮಾನವಾದ ಬೆಳಕು, ನೇರ ಬೆಳಕು ಸಲ್ಲ | ತೇವಾಂಶ ಕಾಪಾಡಲು ದಿನವೂ ಸಿಂಪಡಣೆ. ತೇವಾಂಶ/ನೀರು ಸಾಲದಿದ್ದಲ್ಲಿ ಎಲೆ ಸುಟ್ಟಂಥ ಲಕ್ಷಣ ಕಾಣಬಹುದು |
| ಹಿಪ್ಪಿಯಾಸ್ಟ್ರಮ್(ಹೂ ಬಿಡುವ ಸಸ್ಯ) | ಕಿಟಕಿಯಿಂದ ಹಾಯುವ ಪ್ರಕಾಶಮಾನ ಬೆಳಕು | ವಾರಕ್ಕೊಮ್ಮೆ |
| ಪಚೇರಾ/ಮನಿ ಟ್ರೀ | ಕಿಟಕಿಯಿಂದ ಹಾಯುವ ಪರೋಕ್ಷ ಬೆಳಕು | ನೀರು ಹನಿಸುವ ಅವಧಿಯ ನಡುವೆ ಮಣ್ಣು ಒಣಗಿರಬೇಕು. ತೇವಾಂಶ ಕಾಪಾಡಲು ಮೂರು ದಿನಕ್ಕೊಮ್ಮೆ ನೀರು ಸಿಂಪಡಣೆ. |
| ಪೀಸ್ ಲಿಲಿ (ಹೂ ಬಿಡುವ ಸಸ್ಯ) | ಕಿಡಕಿಯಿಂದ ಹಾಯುವ ಪರೋಕ್ಷ ಬೆಳಕು. ನೆರಳಾದರೂ ಅಡ್ಡಿಯಿಲ್ಲ. | ತೇವಾಂಶ ಕಾಪಾಡಲು ದಿನಕ್ಕೊಮ್ಮೆ ನೀರಿನ ಸಿಂಪಡಣೆ |
| ಪೋಥೋಸ್/ಮನಿ ಪ್ಲಾಂಟ್(ಹ್ಯಾಂಗಿಂಗ್‌ಗೂ ಸೂಕ್ತ)(ಅತಿ ಕಡಿಮೆ ಕಾಳಜಿ) | ಮಿತವಾದ ತೀಕ್ಷ್ಣ ಬೆಳಕು/ಕೃತಕ ಬೆಳಕು | ಒಳ್ಳೆಯ ನೀರುಂಡ ಹಸಿ ಮಣ್ಣು. ಇವುಗಳನ್ನು ಬರೀ ನೀರಿನಲ್ಲಿಯೂ ಬೆಳೆಸಬಹುದು |
| ರಬ್ಬರ್ ಪ್ಲಾಂಟ್ | ಪ್ರಕಾಶಮಾನವಾದ ಪರೋಕ್ಷ ಬೆಳಕು. ಮಂದ ಬೆಳಕನ್ನು ತಡೆಯಬಲ್ಲದು. ನೇರ ಬೆಳಕು ಸಲ್ಲ | ಒಳ್ಳೆಯ ತೇವಾಂಶವಿರುವ ಹಸಿ ಮಣ್ಣು |
| ಸ್ನೇಕ್ ಪ್ಲಾಂಟ್(ಅತಿ ಕಡಿಮೆ ಕಾಳಜಿ) | ಪ್ರಕಾಶಮಾನ/ನೇರ ಬೆಳಕು. ಸುಮಾರು ಎಲ್ಲ ರೀತಿಯ ಬೆಳಕಿನಲ್ಲೂ ಬೆಳೆಯಬಲ್ಲದು. | ವಾರಕ್ಕೊಮ್ಮೆ |
| ಸ್ಪೈಡರ್ ಪ್ಲಾಂಟ್(ಹ್ಯಾಂಗಿಂಗ್‌ಗೂ ಸೂಕ್ತ)(ಅತಿ ಕಡಿಮೆ ಕಾಳಜಿ) | ಮಿತವಾದ ಬೆಳಕು, ಪ್ರಕಾಶಮಾನವಾದರೂ ಅಡ್ಡಿಯಿಲ್ಲ. | ದಿನವೂ ನೀರಿನ ಸಿಂಪಡಣೆ. ವಾರಕ್ಕೊಮ್ಮೆ ಗಿಡದ ಬುಡಕ್ಕೆ. |
| ಫೈಕಸ್ ಬೆಂಜಮಿನಾ(ಬೋನ್ಸಾಯ್‌ಗೂ ಸೂಕ್ತ) | ತೀಕ್ಷ್ಣ ಪರೋಕ್ಷ ಬೆಳಕು. ನೇರ ಬೆಳಕು ಸಲ್ಲ | ತೇವಾಂಶ ಕಾಪಾಡಿಕೊಳ್ಳುತ್ತಾ ವಾರಕ್ಕೊಮ್ಮೆ |
| ಝೀ ಝೀ ಪ್ಲಾಂಟ್(ಅತಿ ಕಡಿಮೆ ಕಾಳಜಿ) | ಎಲ್ಲ ರೀತಿಯ ಬೆಳಕಿಗೂ ಒಗ್ಗಿಕೊಳ್ಳುತ್ತದೆ | ತೇವಾಂಶವಿರುವಂತೆ ನೀರಿನ ಸಿಂಪಡಣೆ, ವಾರಕ್ಕೊಮ್ಮೆ ಬುಡಕ್ಕೆ |
| ಬೆಗೋನಿಯಾ | ಮಿತವಾದ ಬೆಳಕು | ಹೆಚ್ಚಿನ ತೇವಾಂಶವಿರುವಂತೆ ವಾರಕ್ಕೊಮ್ಮೆ ನೀರುಣಿಸುವುದು |
| ಆಫ್ರಿಕನ್ ವೈಲೆಟ್(ಹೂ ಬಿಡುವ ಸಸ್ಯ) | ಪರೋಕ್ಷ ಬೆಳಕು/ಕೃತಕ ಬೆಳಕು. ತೀರಾ ನೆರಳಲ್ಲಿ ಹೂಬಿಡುವುದಿಲ್ಲ. ಪೊಟಾಷ್ ಬೇಕೇ ಬೇಕು | ತೇವವಾದ ಮಣ್ಣು |
| ಕೆಲಾಥಿಯಾ | ಪ್ರಕಾಶಮಾನವಾದ ಪರೋಕ್ಷ ಬೆಳಕು. | ಒಳ್ಳೆಯ ತೇವಾಂಶವಿರುವ ಹಸಿ ಮಣ್ಣು |
| ಕಾರ್ಡಿಲೀನ್ | ಪ್ರಕಾಶಮಾನವಾದ ಬೆಳಕು, ದಿನದ ನಾಲ್ಕೈದು ತಾಸು ನೇರ ಬೆಳಕು ಸಿಕ್ಕರೂ ಒಳ್ಳೆಯದು | ಒಳ್ಳೆಯ ತೇವಾಂಶವಿರುವ ಹಸಿ ಮಣ್ಣು. ನೀರಿನ ಸಿಂಪಡಣೆ ಒಳ್ಳೆಯದು |
| ಫಿಡಲ್ ಲೀಫ್ ಫಿಗ್ | ಪ್ರಕಾಶಮಾನವಾದ ಪರೋಕ್ಷ ಬೆಳಕು/ ಕೃತಕ ಬೆಳಕು | ಮಣ್ಣು ತೇವವಾಗಿದ್ದರೆ ಸಾಕು. ಹಸಿ ಬೇಡ |
| ಫಿಟ್ಟೋನಿಯಾ | ಮಿತವಾದ ಪರೋಕ್ಷ ಬೆಳಕು/ ಕೃತಕ ಬೆಳಕು | ಮಣ್ಣು ತೇವವಾಗಿದ್ದರೆ ಸಾಕು |
| ಮರಾಂತಾ | ಮಂದ/ ಮಿತವಾದ ಪರೋಕ್ಷ ಬೆಳಕು/ ಕೃತಕ ಬೆಳಕು | ಹಸಿ ಮಣ್ಣು, ನೀರು ಸಿಂಪಡಣೆ |
| ಮೊನಸ್ಟೆರಾ | ಮಿತವಾದ ಅಥವಾ ಪ್ರಕಾಶಮಾನವಾದ ಪರೋಕ್ಷ ಬೆಳಕು. ನೇರ ಬೆಳಕು ಸಲ್ಲ | ನೀರು ಹನಿಸುವ ಅವಧಿಯ ನಡುವೆ ಮಣ್ಣು ಸಲ್ಪ ಒಣಗಿರಬೇಕು. |
| ಪೆಪರೋಮಿಯಾ | ಮಂದ ಬೆಳಕು, / ಕೃತಕ ಬೆಳಕು | ನೀರು ಹನಿಸುವ ಅವಧಿಯ ನಡುವೆ ಮಣ್ಣು ಸಲ್ಪ ಒಣಗಿರಬೇಕು. |
| ಸ್ಕೆಫ್ಲಾರಾ | ಪ್ರಕಾಶಮಾನ ಪರೋಕ್ಷ ಬೆಳಕು/ ಕೃತಕ ಬೆಳಕು | ನೀರು ಹನಿಸುವ ಅವಧಿಯ ನಡುವೆ ಮಣ್ಣು ಸಲ್ಪ ಒಣಗಿರಬೇಕು. |
| ಸಿಂಗೋನಿಯಮ್(ಅತಿ ಕಡಿಮೆ ಕಾಳಜಿ) | ಮಿತವಾದ ಬೆಳಕು | ಹಸಿ ಮಣ್ಣು, |
| ಸಕ್ಯುಲೆಂಟ್ಸ್ | ಪ್ರಕಾಶಮಾನವಾದ ಇಡೀ ದಿನದ ಬೆಳಕು | ನೀರು ಹನಿಸುವ ಅವಧಿಯ ನಡುವೆ ಮಣ್ಣು ಒಣಗಿರಬೇಕು. |



